**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಸಂಖ್ಯೆ: ಕಸಂವಿ/ಪರೀಕ್ಷಾಂಗ/ಸಂ.ಸ್ನಾ ಹಾಗೂ ಸ್ನಾ.ಪ–01/2021–22/01** **ದಿನಾಂಕ: 08/04/2022**

# ಪರೀಕ್ಷಾ ಅಧಿಸೂಚನೆ

**ವಿಷಯ: –2021–22 ನೇ ಸಾಲಿನ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನ ಕಾಲೇಜುಗಳಲ್ಲಿ ನಡೆಯಲಿರುವ ಸಂಸ್ಕೃತ/ವೇದ, ಬಿ.ಎ. ಶಾಸ್ತ್ರಿ ಪ್ರಥಮ ಸೆಮಿಸ್ಟರ್ ಹಾಗೂ ಕ.ಸಂ.ವಿ. ಪರಿಸರದ ಸಂಸ್ಕೃತ ಬಿ.ಎ./ಸಂಸ್ಕೃತ ಸಂಜೆ ಕಾಲೇಜು ಬಿ.ಎ./ಶಾಸ್ತ್ರ ಬಿ.ಎ. ಪರೀಕ್ಷೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಆನಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

| ಕ್ರ.ಸಂ | ವಿವರಗಳು | ಅಂತಿಮ ದಿನಾಂಕ |
|---|---|---|
| 1 | ವಿದ್ಯಾರ್ಥಿಗಳು "uucms.karnataka.gov.in" ಮುಖಾಂತರ ಪ್ರವೇಶ ಮಾಡಿ ವಿದ್ಯಾರ್ಥಿಗಳ ಲಾಗಿನ್ ಐ.ಡಿ.ಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಗಳನ್ನು ತುಂಬಿ & ಪರೀಕ್ಷಾ ಶುಲ್ಕಗಳನ್ನು ಆನಲೈನ್ ಮುಖಾಂತರ ಪಾವತಿಸಲು (ದಂಡ ರಹಿತವಾಗಿ) ಕೊನೆಯ ದಿನಾಂಕ | 13/04/2022 |
| 2 | ವಿದ್ಯಾರ್ಥಿಗಳು "uucms.karnataka.gov.in" ಮುಖಾಂತರ ಪ್ರವೇಶ ಮಾಡಿ ವಿದ್ಯಾರ್ಥಿಗಳ ಲಾಗಿನ್ ಐ.ಡಿ.ಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಗಳನ್ನು ತುಂಬಿ & ಪರೀಕ್ಷಾ ಶುಲ್ಕಗಳನ್ನು ಆನಲೈನ್ ಮುಖಾಂತರ ಪಾವತಿಸಲು (with $1^{st}$ penalty-Rs. 100/-) ಕೊನೆಯ ದಿನಾಂಕ | 15/04/2022 |
| 3 | ವಿದ್ಯಾರ್ಥಿಗಳು "uucms.karnataka.gov.in" ಮುಖಾಂತರ ಪ್ರವೇಶ ಮಾಡಿ ವಿದ್ಯಾರ್ಥಿಗಳ ಲಾಗಿನ್ ಐ.ಡಿ.ಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಗಳನ್ನು ತುಂಬಿ & ಪರೀಕ್ಷಾ ಶುಲ್ಕಗಳನ್ನು ಆನಲೈನ್ ಮುಖಾಂತರ ಪಾವತಿಸಲು (with $2^{nd}$ penalty-Rs. 200/-) ಕೊನೆಯ ದಿನಾಂಕ | 16/04/2022 |
| 4 | ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿದ ಮಾಹಿತಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಕಾಲೇಜಿಗೆ ನೀಡಲು ಕೊನೆಯ ದಿನಾಂಕ | 18/04/2022 |
| 5 | IA (Internal Assessment) $C_1$ & $C_2$ ಮೇಜರ್ ಮತ್ತು $C_1$ & $C_2$ ಮೈನರ್ ವಿಷಯದ ಪತ್ರಿಕೆಗಳ ಅಂಕಗಳನ್ನು ಹಾಗೂ ಇತರೆ ಎಲ್ಲಾ ವಿಷಯಗಳ ಆಂತರಿಕ ಅಂಕಗಳನ್ನು ಆನ್‌ಲೈನ್ ಮೂಲಕ ನಮೂದಿಸಲು ಕೊನೆಯ ದಿನಾಂಕ | 15/04/2022 |
| 6 | ಕಾಲೇಜಿನವರು/ಅಧ್ಯಯನಾಂಗದವರು/ಸಂಬಂಧಪಟ್ಟ ವಿದ್ಯಾರ್ಥಿಗಳು ಪ್ರವೇಶ ಪತ್ರಗಳನ್ನು ಡೌನಲೋಡ್ ಮಾಡಿಕೊಳ್ಳಲು ಕೊನೆಯ ದಿನಾಂಕ | 19/04/2022 |
| 7 | ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಬೇಕಾದ ಕೊನೆಯ ದಿನಾಂಕ | 20/04/2022 |
| 8 | ಕಾಲೇಜಿನವರು/ಅಧ್ಯಯನಾಂಗದವರು/ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕಗಳ ಮಾಹಿತಿಯನ್ನು ಅನುಬಂಧ–1 ಮತ್ತು 2 ರಲ್ಲಿ ಕ್ರೋಢೀಕರಿಸಿ ವಿಶ್ವವಿದ್ಯಾಲಯದ ಕಛೇರಿಗೆ ಸಲ್ಲಿಸುವ ಕೊನೆಯ ದಿನಾಂಕ | 19/04/2022 |

**ಸೂಚನೆಗಳು:**

1. 1 ನೇ ಸೆಮಿಸ್ಟರ್‌ನ (NEP ಪದ್ದತಿಯ) ಪರೀಕ್ಷಾ ಕಾರ್ಯಗಳು UUCMS ಮುಖಾಂತರ ಕಾಲೇಜಿನ ವತಿಯಿಂದ "academic module ನಲ್ಲಿ curriculam mapping" ಮಾಡಿದ ನಂತರ, ವಿದ್ಯಾರ್ಥಿಗಳು ಆನ್‌ಲೈನ್(UUCMS) ಮೂಲಕ ಪತ್ರಿಕೆಗಳನ್ನು ಆಯ್ಕೆ ಮಾಡಿಕೊಂಡು "mapping" ಮಾಡಿಕೊಳ್ಳಲು ಕಾಲೇಜಿನವರು QP Code/Course Code ಗಳನ್ನು ನೀಡಬೇಕು ಹಾಗೂ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಲು ಮಾರ್ಗದರ್ಶನ ನೀಡಬೇಕು.

**2.** ವಿದ್ಯಾರ್ಥಿಗಳು ಭರ್ತಿ ಮಾಡಿದ ವಿಷಯಗಳ ಆಯ್ಕೆ (subject selection) ಗಳ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಪರೀಕ್ಷಾ ಅರ್ಜಿಗಳಲ್ಲಿ ನ್ಯೂನತೆಗಳಿದ್ದರೆ, ಪ್ರವೇಶ ಪತ್ರಗಳ ಡೌನಲೋಡ್ ಮಾಡುವ ಮುಂಚೆ ಪ್ರಾಂಶುಪಾಲರ ಅನುಮೋದನೆ ಪಡೆಯುವ ಮೊದಲು, ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿರುವ ಪತ್ರಿಕೆಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳುವುದು, ಇಲ್ಲದಿದ್ದರೇ ಕಾಲೇಜಿನ ಆಡಳಿತ ವರ್ಗ ಹಾಗೂ ಪ್ರಾಂಶುಪಾಲರು/ಅಧ್ಯಯನಾಂಗ/ಪರಿಸರದ ಬಿ.ಎ. ಸಂಯೋಜಕರುಗಳು ಇಂತಹ ತಪ್ಪುಗಳಿಗೆ ಹೊಣೆಗಾರರಾಗಿರುತ್ತರೆ.

**3.** ವಿದ್ಯಾರ್ಥಿಗಳು "uucms.karnataka.gov.in" ಮುಖಾಂತರ ವಿದ್ಯಾರ್ಥಿಗಳ ಪೋರ್ಟಲ್‌ನಲ್ಲಿ ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಸಂದರ್ಭದಲ್ಲಿ ನಿಮ್ಮ ಕೋರ್ಸಿನ DSC/AEEC/Languages SEC ಮತ್ತು Open Elective ಪತ್ರಿಕೆಗಳನ್ನು ಹಾಗೂ ಇತರೆ ಪತ್ರಿಕೆಗಳನ್ನು ಪರಿಶೀಲಿಸಿ ಆಯ್ಕೆ ಮಾಡಿಕೊಳ್ಳುವುದು.

**<u>ಪರೀಕ್ಷಾ ಶುಲ್ಕಗಳ ದರಗಳು</u>**

1. **ಶುಲ್ಕದ ವಿವರ:**

| ಕ್ರ.ಸಂ | ಪರೀಕ್ಷೆಗಳ ವಿವರ | ಪರೀಕ್ಷಾ ಶುಲ್ಕ | ಒಟ್ಟು ಮೊತ್ತ | ವಿಳಂಬ ಶುಲ್ಕ |
|---|---|---|---|---|
| 1. | ಸಂಸ್ಕೃತ/ವೇದ ಬಿ.ಎ. ಶಾಸ್ತ್ರಿ ಪ್ರಥಮ ಸೆಮಿಸ್ಟರ್ ಹಾಗೂ ಕ.ಸಂ.ವಿ. ಪರಿಸರದ ಸಂಸ್ಕೃತ ಬಿ.ಎ./ಸಂಸ್ಕೃತ ಸಂಜೆ ಕಾಲೇಜು ಬಿ.ಎ./ಶಾಸ್ತ್ರ ಬಿ.ಎ | ಬಿ.ಎ. 1 ಪ್ರಥಮ ಸೆಮಿಸ್ಟರ್ – 400/– | 400.00 | 100.00 |

**<u>ವಿಶೇಷ ಸೂಚನೆಗಳು:</u>**

**1.** ಶುಲ್ಕ ಪಾವತಿಸಲು ನಿಗದಿಪಡಿಸಿರುವ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.

2. ಪ್ರತಿಯೊಬ್ಬ ಅಭ್ಯರ್ಥಿಯೂ ಮೊದಲನೇ ಷಾಣ್ಮಾಸಿಕ ಪರೀಕ್ಷೆಗೆ ಮೇಲೆ ನಿಗದಿಪಡಿಸಿರುವ ಶುಲ್ಕವನ್ನು ಪಾವತಿಸತಕ್ಕದ್ದು.

3. ಸಂಸ್ಕೃತ/ವೇದ ಬಿ.ಎ.ಶಾಸ್ತ್ರಿ ಪ್ರಥಮ ಸೆಮಿಸ್ಟರ್ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡ ಪಟ್ಟಿಯಲ್ಲಿ ತಿಳಿಸಿದೆ. ಸರ್ಕಾರದ ಆದೇಶ ಸಂಖ್ಯೆ:– **<u>"ಇಡಿ 295 ಯುಎನ್ಇ 2018, ದಿನಾಂಕ :– 23/01/2019 ರಂತೆ"</u>** ಹಾಗೂ **<u>ದಿ :– 13/03/2019 ರಂದು ನಡೆದ ಪ್ರಶಾಸನ ಸಮಿತಿಯ ಸಭೆಯ 51 ನೇ ನಿರ್ಣಯದಂತೆ</u>** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಒಟ್ಟು ಪರೀಕ್ಷಾ ಶುಲ್ಕದಲ್ಲಿ ಶೇ 50 ರಷ್ಟು ವಿನಾಯಿತಿಯನ್ನು ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು. **<u>ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು</u>**.

4.ಒಂದು ವೇಳೆ ಪೋಷಕರ ವಾರ್ಷಿಕ ಆದಾಯ ರೂ.2,50,000/–(ಎರಡು ಲಕ್ಷದ ಐವತ್ತು ಸಾವಿರ ರೂ.ಗಳು) ಮೀರಿದ್ದಲ್ಲಿ (**ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1**) ಅಂತಹ ವಿದ್ಯಾರ್ಥಿಗಳು ಪರೀಕ್ಷಾ ಪೂರ್ಣ ಶುಲ್ಕವನ್ನು ಭರಿಸತಕ್ಕದ್ದು,

**ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಪರೀಕ್ಷಾ ಶುಲ್ಕವನ್ನು ಯಾವ ಕಾರಣದಿಂದಲೂ ಮರುಪಾವತಿ ಮಾಡಲಾಗುವುದಿಲ್ಲ ಮತ್ತು ಅದನ್ನು ಮುಂದಿನ ಪರೀಕ್ಷೆಗಳಿಗೂ ಸರಿದೂಗಿಸಿಕೊಳ್ಳಲಾಗುವುದಿಲ್ಲ.
2. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಇತ್ತೀಚಿನ ಭಾವಚಿತ್ರದ ಮೇಲೆ ಪೂರ್ತಿ ಸಹಿ ಮಾಡಿ ವಿದ್ಯಾರ್ಥಿಯನ್ನು ಗುರುತಿಸಲಾಗಿದೆ, ಎಂದು ಬರೆಯಿಸಿ ಪ್ರಾಂಶುಪಾಲರಿಂದ ಸಹಿ ಮಾಡಿಸಿ ಅವರ ಪ್ರವೇಶ ಪತ್ರಿಕೆಗೆ ಅಂಟಿಸಿ ಪರೀಕ್ಷಾ ಅರ್ಜಿಯೊಡನೆ ಕಾಲೇಜಿಗೆ ನೀಡಬೇಕು.
3. ಭಾವಚಿತ್ರಗಳಿಲ್ಲದ ಹಾಗೂ **"ಮೌಲ್ಯಮಾಪನ ಕುಲಸಚಿವರ/"ಪರೀಕ್ಷಾ ನಿಯಂತ್ರಕರ'** ಅಥವಾ **"ಪ್ರಾಂಶುಪಾಲರ"** ಸಹಿ ಇಲ್ಲದ ಪ್ರವೇಶಪತ್ರಗಳನ್ನು ಪರೀಕ್ಷಾ ಕೊಠಡಿಯಲ್ಲಿ ಹಾಜರುಪಡಿಸುವ ವಿದ್ಯಾರ್ಥಿಗಳಿಗೆ ಯಾವುದೇ ಕಾರಣಕ್ಕೂ ಕೇಂದ್ರದ ಪರೀಕ್ಷಾ ಮುಖ್ಯಾಧಿಕಾರಿಗಳು/ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ತನಿಖಾಧಿಕಾರಿಗಳು ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ಕೊಡುವುದಿಲ್ಲ.

**ಪ್ರಾಂಶುಪಾಲರು ಅನುಸರಿಸಬೇಕಾದ ಸೂಚನೆಗಳು:**

1. Open Elective ವಿಷಯವಾದ ಯೋಗ ಪತ್ರಿಕೆಯನ್ನು (5ನೇ ಪತ್ರಿಕೆ) ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಂಡಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಕ್ರ.ಸಂ. 07 ರಲ್ಲಿ ಸೂಚಿಸಿರುವ ದಿನಾಂಕದ ಒಳಗಾಗಿ 20 ಅಂಕಗಳಿಗೆ ಮಾತ್ರ ಪ್ರಾಯೋಗಿಕ ಪರೀಕ್ಷೆಯನ್ನು ನಡೆಸುವುದು.
2. ಎಲ್ಲಾ ಮಹಾವಿದ್ಯಾಲಯಗಳು ಕಡ್ಡಾಯವಾಗಿ ತಮ್ಮ ಕಾಲೇಜಿನ ಮಾನ್ಯತೆ ಪತ್ರವನ್ನು ಪರೀಕ್ಷಾಂಗಕ್ಕೆ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ.
3. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅಧಿಕೃತ ಮಾನ್ಯತೆ ಪಡೆದ ಅನುದಾನಿತ/ಅನುದಾನರಹಿತ–ಸಂಸ್ಕೃತ ಕಾಲೇಜುಗಳು/ಪರಿಸರದ/ಸಂಸ್ಕೃತ ಸಂಜೆ ಕಾಲೇಜು/ಶಾಸ್ತ್ರ ಬಿ.ಎ.ಮಾತ್ರ ಪರೀಕ್ಷಾ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
4. ಪರಿಸರದ/ಸಂಸ್ಕೃತ ಸಂಜೆ ಕಾಲೇಜು/ಶಾಸ್ತ್ರ ಬಿ.ಎ. ಹಾಗೂ ಸಂಸ್ಕೃತ/ವೇದ ಬಿ.ಎ.ಶಾಸ್ತ್ರಿ ತರಗತಿಗಳ ಪರೀಕ್ಷೆಗಳು ನಿಗದಿಪಡಿಸಿರುವ ಹೊಸ ಪಠ್ಯಕ್ರಮದಂತೆ ನಡೆಯುತ್ತವೆ.
5. ಪರೀಕ್ಷೆಯ ನಂತರ ವಿನಾಯಿತಿ ಕೋರಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಅರ್ಜಿಯಲ್ಲಿ ಕಡ್ಡಾಯವಾಗಿ ತಂದೆ ಹಾಗೂ ತಾಯಿಯ ಹೆಸರನ್ನು ನಮೂದಿಸುವುದು. ಜನ್ಮ ದಿನಾಂಕಕ್ಕೆ ಸಂಬಂಧಪಟ್ಟ ದಾಖಲೆಯ ಜೆರಾಕ್ಸ್ ಪ್ರತಿಯನ್ನು ಪ್ರಾಚಾರ್ಯರು ದೃಢೀಕರಿಸಿ ಸಲ್ಲಿಸುವುದು.
7. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ ಸಮೀಪದ ಪರೀಕ್ಷಾ ಕೇಂದ್ರಕ್ಕೆ ವರ್ಗಾಯಿಸಲಾಗುವುದು.
8. **ಈ ಹಿಂದೆ ತೇರ್ಗಡೆಯಾಗಿರುವ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ದೃಢೀಕರಿಸಿ ಅರ್ಜಿಯ ಜೊತೆ ಲಗತ್ತಿಸುವುದು. (ಇಲ್ಲದಿದ್ದಲ್ಲಿ ತಿರಸ್ಕರಿಸಲಾಗುವುದು).**
9. ಯಾವುದೇ ಅಭ್ಯರ್ಥಿಗಳು ನೇರವಾಗಿ ಶಾಸ್ತ್ರಿ ಮತ್ತು ಆಚಾರ್ಯ ಅಂತಿಮ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.
10. **ಯಾವುದೇ ಸಂಸ್ಕೃತ ಪಾಠಶಾಲೆ / ಕಾಲೇಜಿನಲ್ಲಿ ಉದ್ಯೋಗದಲ್ಲಿರುವವರು / ಖಾಸಗಿ ಉದ್ಯೋಗಿಗಳು ಕಾಲೇಜಿನಲ್ಲಿ ರೆಗ್ಯುಲರ್ ವಿದ್ಯಾರ್ಥಿಗಳಾಗಿ ಪರೀಕ್ಷೆ ತೆಗೆದುಕೊಳ್ಳುವಂತಿಲ್ಲ.**
11. ಹೊರ ರಾಜ್ಯದಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಿ ಪ್ರಮಾಣ ಪತ್ರವನ್ನು ನೀಡಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಪ್ರಮಾಣ ಪತ್ರವು ವಿಶ್ವವಿದ್ಯಾಲಯದ ಪ್ರವೇಶಾರ್ಹತೆಯ ನಿಯಮಾವಳಿಗೆ ಅನುಗುಣವಾಗಿದ್ದಲಿ ಮಾತ್ರ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು, ಅನ್ಯಥಾ ತಿರಸ್ಕರಿಸಲಾಗುವುದು.

12. ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದ ಎಲ್ಲಾ ಪರೀಕ್ಷಾ ಸಂಬದ್ಧ ಮಾಹಿತಿಗಳನ್ನು **Microsoft word, pdf, image ನಲ್ಲಿ ಕಳುಹಿಸಬಾರದು. ಕೇವಲ Microsoft excel sheet ನಲ್ಲಿ ಕಳುಹಿಸಬೇಕು. Font size-12. Font name- Cambria (Headings). ವಿದ್ಯಾರ್ಥಿಗಳ ಮಾಹಿತಿಯನ್ನು ಸಿ.ಡಿ.ಯಲ್ಲಿ ಕಳುಹಿಸುವುದರ ಬದಲಾಗಿ examksu2016@gmail.com** ಈ ಇ–ಮೇಲ್ ವಿಳಾಸಕ್ಕೆ ಸಕಾಲದಲ್ಲಿ ಕಳುಹಿಸುವುದು ಮತ್ತು ಪ್ರತಿಯನ್ನು (hard copy) ಪರೀಕ್ಷಾ ನಿಯಂತ್ರಕರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ–18 ಈ ವಿಳಾಸಕ್ಕೆ ಕಳುಹಿಸುವುದು.
13. ಬಿ.ಎ. ಸಂಸ್ಕೃತ/ವೇದ ಶಾಸ್ತ್ರಿ ಪ್ರಥಮ, ಸೆಮಿಸ್ಟರ್. ಈ ಎಲ್ಲಾ ವಿದ್ಯಾರ್ಥಿಗಳ ಮಾಹಿತಿಯ ನಾಮಾಂಕಿತ ಪಟ್ಟಿಗಳನ್ನು ಅನುಬಂಧ–1 ಮತ್ತು ಅನುಬಂಧ–2 ಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು. ನಮೂನೆ 2 ರಲ್ಲಿ ಐಚ್ಛಿಕ ವಿಷಯ ಮತ್ತು ವಿನಾಯಿತಿ ಇರುವ ವಿಷಯಗಳನ್ನು ಸ್ಪಷ್ಟವಾಗಿ ನಮೂದಿಸುವುದು.
14. UUCMS **ಪೋರ್ಟಲ್‌ನಲ್ಲಿ ನೋಂದಾಯಿತವಾದ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆಗಳನ್ನು ಕ್ರಮ ಸಂಖ್ಯೆಯಲ್ಲಿ ಸಿದ್ದಪಡಿಸಿ, ಅನುಬಂಧ – 1 & 2 ರಲ್ಲಿ ಕಳುಹಿಸುವುದು ಇಲ್ಲದಿದ್ದಲ್ಲಿ ಫಲಿತಾಂಶ ಪ್ರಕಟಣೆ ಸಂದರ್ಭದಲ್ಲಿ ಗೊಂದಲವುಂಟಾಗುವ ಸಾಧ್ಯತೆ ಇರುತ್ತದೆ.** ತರಗತಿವಾರು ಸಿದ್ಧಪಡಿಸಿದ ನಾಮಾಂಕಿತ ಪಟ್ಟಿಯ ಕೊನೆಯಲ್ಲಿ ಆಯಾಯ ಶಾಸ್ತ್ರಭಾಗಗಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಮತ್ತು ವರ್ಷ ಹಾಗೂ ಶುಲ್ಕದ ವಿವರಗಳನ್ನು ಸರಿಯಾಗಿ ನಮೂದಿಸುವುದು.
15. ಬಿ.ಎ. ಸಂಸ್ಕೃತ/ವೇದ ಶಾಸ್ತ್ರಿ ಪ್ರಥಮ, ಸೆಮಿಸ್ಟರ್. ಅಭ್ಯರ್ಥಿಗಳಿಗೆ ಸೆಮಿಸ್ಟರ್ ಪರೀಕ್ಷೆಯಲ್ಲಿ ಪ್ರತಿಯೊಂದು ಪತ್ರಿಕೆಗಳಿಗೆ 60 ಅಂಕಗಳನ್ನು, ಇನ್ನುಳಿದ 40 ಅಂಕಗಳನ್ನು ಆಂತರಿಕ ಪರೀಕ್ಷೆಗಳಿಗಾಗಿ (Assignment) ನಿಗದಿಪಡಿಸಲಾಗಿದೆ. ಈ ಆಂತರಿಕ ಪರೀಕ್ಷೆಗಳನ್ನು ಆಯಾಯ ಕಾಲೇಜುಗಳ ಪ್ರಾಚಾರ್ಯರೇ ನಡೆಸಿ ಆ ಅಂಕಗಳನ್ನು ಆನಲೈನ್‌ಲ್ಲಿ ಪೂರೈಸುವುದು.
16. ಕಾಲೇಜುಗಳು ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪಟ್ಟಿಯನ್ನು ಪ್ರಾಚಾರ್ಯರು ದೃಢೀಕರಿಸಿ ಕಳುಹಿಸಿಕೊಡುವುದು.
17. **ಅನುದಾನಿತ ಸಂಸ್ಕೃತ ಕಾಲೇಜುಗಳು ಹೊಸದಾಗಿ ಶಾಸ್ತ್ರವಿಭಾಗವನ್ನು ಪ್ರಾರಂಭ ಮಾಡಿದ್ದಲ್ಲಿ ವಿಶ್ವವಿದ್ಯಾಲಯದಿಂದ ಪಡೆದ ಅನುಮತಿ ಪತ್ರ ಲಗತ್ತಿಸತಕ್ಕದ್ದು ಮತ್ತು ಈ ಶಾಸ್ತ್ರಗಳು ಯಾವ ವರ್ಷದವರೆಗೆ ಮಾನ್ಯತೆ ಹೊಂದಿರುತ್ತದೆ ಎಂಬುದನ್ನೂ ತಿಳಿಸಬೇಕು ಹಾಗೂ ಅನುದಾನರಹಿತ ಸಂಸ್ಕೃತ ಕಾಲೇಜುಗಳ ಮಾನ್ಯತೆ ಪತ್ರ ಲಗತ್ತಿಸಬೇಕು.**
18. ನಾಮಾಂಕಿತ ಪಟ್ಟಿಗಳಲ್ಲಿ ಮತ್ತು ಅರ್ಜಿ ನಮೂನೆಗಳಲ್ಲಿ ಏನಾದರೂ ದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರು ನೇರ ಹೊಣೆಗಾರರಾಗಿರುತ್ತಾರೆ.
19. ಕನಿಷ್ಠ ಶೇಕಡ 75 ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ವಿದ್ಯಾರ್ಥಿಗಳು ಹೊಂದಿರಬೇಕಾಗಿದ್ದು, ಪ್ರಾಚಾರ್ಯರು ಇದನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.
20. **ಪ್ರಥಮ ಬಿ.ಎ ತರಗತಿಗೆ ಪ್ರವೇಶಾತಿಯನ್ನು ಪಡೆದ ವಿದ್ಯಾರ್ಥಿಗಳ ವರ್ಗಾವಣೆ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಪ್ರಾಚಾರ್ಯರು ದೃಢೀಕರಿಸಿ ಕಳುಹಿಸತಕ್ಕದ್ದು.**

**ಆದೇಶದ ಮೇರೆಗೆ,**

**ಪರೀಕ್ಷಾ ನಿಯಂತ್ರಕರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು.

# SAMPLE-1

| SL.NO | REG NO | NAME OF THE STUDENTS | FATHER'S NAME | **SUBJECT** | I | II | III | IV | V | VI | VII | VIII |
|---|---|---|---|---|---|---|---|---|---|---|---|---|
| 1 | | SHRUTHI H M | MUNIYAPPA | ALANKARA | AL | AL | HIST ORY | HIST ORY | OE | KAN | SAN/ ENG | DF |
| 2 | | SHRIVANI K E | APPORAO K | ALANKARA | AL | AL | HIST ORY | HIST ORY | OE | KAN | SAN/ ENG | DF |
| 3 | | SURESH BABU | RAMASWAMY | VYAKARANA | VY | VY | HIST ORY | HIST ORY | OE | KAN | SAN/ ENG | DF |
| 4 | | VINUTHA B T | THIPPESWAMY | VYAKARANA | VY | VY | HIST ORY | HIST ORY | OE | KAN | SAN/ ENG | DF |

# SAMPLE-2

**FORM-02**

**KARNATAKA SAMSKRIT UNIVERSITY, CHAMARAJPETE, BAN-18**

**NAME OF THE COLLEGE & CODE:**

**NAME OF THE COURSE:**

| **SL. NO** | **NAME OF THE STUDENTS** | **COURSE** | **FATHER'S NAME** | **MOTHER'S NAME** | **GENDER** | **CASTE** | **FEE PAID** | **UPI NO** |
|---|---|---|---|---|---|---|---|---|
| 1 | SHRUTHI H M | BA | MUNIYAPPA | RANGAMMA | FEMALE | GEN | 400 | T2121045 6099 |
| 2 | SHRIVANI K E | BA | APPORAO K | VASUMATI | FEMALE | SC | 200 | T2121045 6099 |
| 3 | SURESH | BA | RAMASWAMY | SAVITHRI | MALE | GEN | 400 | T2121045 6099 |
| 4 | VINUTHA B T | BA | THIPPAYYA | GAYATRI | FEMALE | C-I | 200 | T2121045 6099 |

**DETAILS OF NR**

| **SL. NO** | **CLASS** | **SC** | | **ST** | | **CAT-I** | | **OBC** | | **GM** | | **REPEATER** | | **TOTAL** | |
|---|---|---|---|---|---|---|---|---|---|---|---|---|---|---|---|
| | | **M** | **F** | **M** | **F** | **M** | **F** | **M** | **F** | **M** | **F** | **M** | **F** | **M** | **F** |
| 1 | BA-I | 1 | 0 | 0 | 1 | 0 | 0 | 1 | 0 | 1 | 2 | 3 | 1 | 6 | 4 |
| **TOTAL** | | **1** | **0** | **0** | **1** | **0** | **0** | **1** | **0** | **1** | **2** | **3** | **1** | **6** | **4** |

PRINCIPAL CONTACT NUMBER & E.MAIL ID OF COLLEGE :-